



(6ನೇ ಪುಟದಿಂದ)

ಸಮಯ ಮಿತಿಯ ಪ್ರದರ್ಶನಗಳಲ್ಲಿ ಕೂಡ ಗಣಪತಿ ಪೂಜೆಯನ್ನು ಕೈ ಬಿಡುವುದಿಲ್ಲ.

ಹಿಂದೆ ಮೇಳಗಳಲ್ಲಿ ಪ್ರತ್ಯಕ್ಷ ದೇವರ ಅಥವಾ ಗಣಪತಿಯ ಮೂರ್ತಿಯನ್ನು ಇಡುವ ಪದ್ಧತಿ ಇರಲಿಲ್ಲವೆಂದು ಹೇಳಲಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗುಂಡಬಾಳೆಯಲ್ಲಿ ಬೇಸಿಗೆಯ ಆರು ತಿಂಗಳು ಪ್ರತಿನಿತ್ಯ ಪ್ರದರ್ಶನ ನಡೆಯುತ್ತದೆ. ಅಲ್ಲಿ ಸುಮಾರು ಎಪ್ಪತ್ತೈದು ವರ್ಷಗಳಿಂದಲೂ ಬಣ್ಣದ ಮನೆಯಲ್ಲಿಯೂ ರಂಗಸ್ಥಳದಲ್ಲಿಯೂ ಕಾಷ್ಠಶಿಲ್ಪದ ಸುಂದರ ಮೂರ್ತಿಯನ್ನು ಪೂಜಿಸುವ ಪದ್ಧತಿ ನಡೆದುಕೊಂಡು ಬಂದಿದೆ. ಹಳೆಯ ಕಾಷ್ಠಮೂರ್ತಿ ಜೀರ್ಣಗೊಂಡಾಗ ಹೊಸದು ಸಿದ್ಧಗೊಂಡಿದೆ. ಹಲವು ಶ್ರೀಮಂತ ಮೇಳಗಳಲ್ಲಿ ವಿವಿಧ ಲೋಹಗಳ ಗಣಪತಿ ಮೂರ್ತಿಯನ್ನು ಇಟ್ಟುಕೊಂಡು ಬಣ್ಣದ ಮನೆಯಲ್ಲಿಯೂ ರಂಗಸ್ಥಳದಲ್ಲಿಯೂ ವೈಭವದಿಂದ ಪೂಜಿಸುವ ಕ್ರಮ ಇಂದಿಗೂ ನಡೆದುಕೊಂಡು ಬಂದಿದೆ.

ಯಕ್ಷಗಾನ ರಂಗಭೂಮಿ ಅತ್ಯಂತ ಸೊಗಸಾಗಿ ಮತ್ತು ಅರ್ಥಪೂರ್ಣವಾಗಿ ಗಣಪತಿಯ ಕಲ್ಪನೆಯನ್ನು ಯಕ್ಷಗಾನೀಕರಣ ಗೊಳಿಸಿದೆ ಎನ್ನುವುದು ಅಚ್ಚರಿಯ ಸಂಗತಿ. 1955ರ ಸುಮಾರಿಗೆ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಸೋಂದಾ ಕೃಷ್ಣ ಭಂಡಾರಿಯವರ 'ಯಕ್ಷಗಾನ ಕೈಪಿಡಿ' ಗ್ರಂಥದಲ್ಲಿಯೇ ಈ ಬಗ್ಗೆ ಪ್ರಸ್ತಾಪವಿದೆ. ಯಕ್ಷಗಾನದ ಮೊಟ್ಟಮೊದಲ ಈ ಶಾಸ್ತ್ರಗ್ರಂಥ 2015ರಲ್ಲಿ ಪುನರ್ಮುದ್ರಣಗೊಂಡಿದೆ. ಈ ಗ್ರಂಥದ ಪ್ರಕಾರ ಮಂಡಳಿಯ ಮುಖ್ಯ ಕಿರೀಟವೇ ಗಣಪತಿ. ಅದನ್ನು ಮಧ್ಯದಲ್ಲಿರಿಸಿ ಉಳಿದ ಕಿರೀಟಗಳನ್ನು ಎಡಬಲಗಳಲ್ಲಿರಿಸಿ ಪೂಜಿಸುವುದು ಯಕ್ಷಗಾನದ ಪದ್ಧತಿ ಎಂದಿದ್ದಾರೆ. ಚೌಕದ ಮನೆಯಲ್ಲಿ ಮತ್ತು ನಂತರ ರಂಗಮಧ್ಯದ ಆಸನದ ಮೇಲೆ ಇರಿಸಿ ಸ್ತುತಿಮಾಡಿ ಪೂಜಿಸುವ ಕ್ರಮವನ್ನು ವಿವರಿಸಿದ್ದಾರೆ. ಆದ್ದರಿಂದ ಯಕ್ಷಗಾನದಲ್ಲಿ ಪೂಜೆಗೊಳ್ಳುವುದು ಕಿರೀಟ ಗಣಪತಿ. ಪ್ರದರ್ಶನದ ಮುಕ್ತಾಯದಲ್ಲಿಯೂ ಚೌಕದ ಅಂದರೆ ಬಣ್ಣದ ಮನೆಗೆ ಬಂದು ಆಟದ ಪೂರ್ವದಂತೆ ಕಿರೀಟ ಇಟ್ಟು ಗಣಪತಿಯ ಮಂಗಲಾಚರಣೆ ಮಾಡುವುದನ್ನೂ ಕೃಷ್ಣ ಭಂಡಾರಿ ಹೇಳಿದ್ದಾರೆ.

ಇದೇ ಕಿರೀಟ ಗಣಪತಿಯನ್ನು ವಿನಾಯಕನ ವಿಶ್ವಪ್ರಸಿದ್ಧ ರೂಪಕ್ಕೆ ಪರಿವರ್ತಿಸುವ ಸುಲಭ ವಿಧಾನವೊಂದನ್ನು ಈ ರಂಗಮಾಧ್ಯಮ ಕಂಡುಕೊಂಡು ಅನುಸರಿಸುತ್ತ ಬಂದಿದೆ. ಡಾ.ಎಂ.ಪ್ರಭಾಕರ ಜೋಶಿ 'ಯಕ್ಷಗಾನ ಪದಕೋಶದಲ್ಲಿ' ಬಡಗುತಿಟ್ಟಿನಲ್ಲಿ ಕಿರೀಟಕ್ಕೆ ವೀರಕಸೆಯನ್ನು ಕಟ್ಟಿ ತೆರೆಯ ಹೊರಗೆ, ಇಳಿ ಬಿಡುವರು. ವೀರಕಸೆ ಎಂಬುದು ಇಲ್ಲಿ ಸೊಂಡಿಲಿನ ಪ್ರತೀಕ' ಎಂದು ಬರೆದಿದ್ದಾರೆ. ವೀರಗಸೆ ಎಂದರೆ ಯಕ್ಷಗಾನದ ಒಂದು ಆಭರಣ. ಇದಕ್ಕೆ ಕಾಂಚೀಧಾಮ ಎನ್ನುವ ಇನ್ನೊಂದು ಹೆಸರೂ ಇದೆ. ಯಕ್ಷಗಾನದ ಪುರುಷವೇಷಗಳು ಹೊಟ್ಟೆಯ ಕೆಳಭಾಗದಲ್ಲಿ ಈ ಆಭರಣವನ್ನು ಕಟ್ಟಿ ತೊಡೆಗಳ ಮಧ್ಯೆ ಇಳಿಬಿಡುತ್ತವೆ.

ಪ್ರದರ್ಶನದಲ್ಲಿ ಕಥೆ ತೊಡಗುವ ಒಡ್ಡೋಲಗಕ್ಕಿಂತ ಮೊದಲು ಇಬ್ಬರು ಕೈತೆರೆ ಹಿಡಿಯುತ್ತಾರೆ. ಯಾರಾದರೊಬ್ಬರು ತೆರೆಯ ಹಿಂದುಗಡೆ ಮರೆಯಲ್ಲಿ ನಿಂತು ಕಾಂಚೀಧಾಮವನ್ನು ಮಾತ್ರ ತೆರೆಯ ಹೊರಗೆ ಇಳಿ ಬಿಟ್ಟು ಕಿರೀಟ ಗಣಪತಿಯನ್ನು ಹಿಡಿಯುತ್ತಾರೆ. ಬಳಿಕೆಯಲ್ಲಿರುವ ಭಾಗವತರ ಹಾಡಿಗೆ ಎರಡು ಸ್ತ್ರೀವೇಷಗಳು ನಾಟ್ಯವಾಡಿ ಯಕ್ಷಗಾನೀಯ ಪೂಜೆ ಸಲ್ಲಿಸುತ್ತಾರೆ.

ಬಣ್ಣದ ಮನೆಯ ಕಿರೀಟ ಗಣಪತಿ ಪೂಜೆಗೆ ಆರತಿಯೇ ಮುಂತಾದ ಯಕ್ಷಗಾನೇತರ ವಿಧಾನಗಳನ್ನು ಅನುಸರಿಸಿದರೂ ರಂಗದಲ್ಲಿ ಮಾತ್ರ ಯಕ್ಷಗಾನೀಯ ಗಾಯನ, ವಾದನ, ನರ್ತನಗಳಿಂದಲೇ ಪೂಜೆ ಸಲ್ಲುತ್ತದೆ.

ಬಹುಮಟ್ಟಿಗೆ ಯಕ್ಷಗಾನದಲ್ಲಿ ಕಾಸರಗೋಡಿನ ಮಧೂರು ವಿಘ್ನೇಶನನ್ನೂ ಇಡಗುಂಜಿ ವಿನಾಯಕನನ್ನೂ ಸ್ತುತಿಸುವುದು ಪದ್ಧತಿ. ಅದಕ್ಕಾಗಿಯೇ 'ಲಿಖಿತ ಹಳೆಯ ಆಧಾರದಂತೆ ಮಧೂರಿನಿಂದ ಇಡಗುಂಜಿವರೆಗಿನ ಹರಹು ಪಡುಕರಾವಳಿಯ ಯಕ್ಷಗಾನದ ಆಡುಂಬೊಲ' ಎಂದು ಡಾ.ಕೆ.ಎಂ. ರಾಘವ ನಂಬಿಯಾರ್ 'ಯಾಜಿ ಭಾಗವತರು' ಜೀವನ ಚರಿತ್ರೆಯಲ್ಲಿ ಹೇಳಿದ್ದಾರೆ. ಈಗಲೂ ಈ ಕಿರೀಟ ಗಣಪತಿ ಮಲೆನಾಡು ಕರಾವಳಿಯ ಅನೇಕ ಮನೆಗಳ ದೇವರ ಪೀಠದಲ್ಲಿ ವಿರಾಜಮಾನನಾಗಿ ನಿತ್ಯಪೂಜೆ ಮತ್ತು ಕಡುಬು ಪಂಚಕಜ್ಜಾಯಗಳ ನೈವೇದ್ಯ ಸ್ವೀಕರಿಸುತ್ತಾನೆ.

ಒಂದೆರಡು ಆಖ್ಯಾನಗಳನ್ನು ಹೊರತು ಪಡಿಸಿದರೆ ಗಣಪತಿ ಪಾತ್ರವಾಗಿ ರಂಗಸ್ಥಳಕ್ಕೆ ಬರುವ ಸಂದರ್ಭಗಳು ವಿರಳ.ಆದರೆ ವಿಘ್ನವನ್ನುಂಟು ಮಾಡಬಲ್ಲ, ಮನಸ್ಸು ಬಂದರೆ ಆ ವಿಘ್ನವನ್ನು ನಿವಾರಿಸಬಲ್ಲ ವಿಘ್ನೇಶಪ್ರಜ್ಞೆ ಈ ರಂಗಭೂಮಿಯನ್ನು ಬಲವಾಗಿ ಆವರಿಸಿದೆ. ಬಣ್ಣದ ಮನೆಯಲ್ಲಿ ವ್ಯವಸ್ಥೆಗೊಳಿಸುವ ದೇವರ ಚೌಕಿಗೇ ಗಣಪತಿ ಚೌಕಿ, ಆಟದ ಸಾಮಗ್ರಿಗಳ ಪೆಟ್ಟಿಗೆಗೆ ಗಣಪತಿ ಪೆಟ್ಟಿಗೆ ಎಂಬ ಹೆಸರೇ ಬಂದಿದೆ.